ಓಸ್. ನಂ. 352/2017
ಪಿಡಬ್ಲ್ಯು :1

ಸಾಕ್ಷಿಗೆ ಇಂದು ದಿನಾಂಕ 11/06/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು : ಶ್ರೀ. ಎಸ್ ಎಸ್ ಆರ್ ವಕೀಲರಿಂದ ಪ್ರತಿವಾದಿ ಪರವಾಗಿ

1.ನನ್ನ ಗಂಡನ ಹೆಸರು ಬಸವರಾಜ. ನನ್ನ ಗಂಡ ಬಸವರಾಜ ಇವರ ಅಜ್ಜನ ಹೆಸರು ಭೀಮರಾಯ ಎಂದರೆ ಸರಿ. ಭೀಮರಾಯರವರಿಗೆ ರುಕ್ಮಾಬಾಯಿ ಎಂಬ ಹೆಂಡತಿ ಇದ್ದರು ಎಂದರೆ ಸರಿ. ಭೀಮರಾಯ ಮತ್ತು ರುಕ್ಮಾಬಾಯಿಯವರಿಗೆ ಸಿದ್ದವ್ವ, ಬೌರಮ್ಮ, ಮಲ್ಲಪ್ಪ, ಶಂಕ್ರೆಮ್ಮ, ಕಸ್ತೂರಿಬಾಯಿ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ಕಸ್ತೂರಿಬಾಯಿ ಇವರನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಮಲ್ಲಪ್ಪ ಮತ್ತು ಶಂಕ್ರೆವ್ವರವರನ್ನು ಮಾತ್ರ ಹೊರತುಪಡಿಸಿ ಉಳಿದವರನ್ನು ಪಕ್ಷಗಾರನ್ನಾಗಿ ಮಾಡಿರುವುದಿಲ್ಲ. ಮಲ್ಲಪ್ಪರವರು ನನ್ನ ಗಂಡನ ಅಪ್ಪ ಎಂದರೆ ಸರಿ . ಶಂಕ್ರೆವ್ವರವರು ನನ್ನ ಗಂಡನ ತಾಯಿ ಎಂದರೆ ಸರಿ. ಮಲ್ಲಪ್ಪ ಮತ್ತು ಶಂಕ್ರೆವ್ವರವರಿಗೆ ಸುವರ್ಣ , ಬಸವರಾಜ ಮತ್ತು ಶಶಿಕಲಾ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ಗಂಡ ಬಸವರಾಜ ಅಪಘಾತದಲ್ಲಿ ಮರಣಹೊಂದಿರುತ್ತಾನೆ ಎಂದರೆ ಸರಿ. ಸುವರ್ಣ ಮತ್ತು ಶಶಿಕಲಾ ಇರುತ್ತಾರೆ ಎಂದರೆ ಸರಿ. ಸುವರ್ಣ ಮತ್ತು ಶಶಿಕಲಾರವರು ಪ್ರತಿವಾದಿ ನಂ. 1 ಮತ್ತು 2 ರವರ ಮಕ್ಕಳು ಎಂದರೆ ಸರಿ. ಸುವರ್ಣ ಮತ್ತು ಶಶಿಕಲಾ ಇವರನ್ನು ಸದರಿ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ.

2. ನನ್ನ ತವರು ಮನೆ ಶಿರನಾಳ. ನಾನು ಈಗ ಶಿರನಾಳದಲ್ಲಿ ಇರುತ್ತೇನೆ. ಮೃತ ಬಸವರಾಜ ಮತ್ತು ನನಗೆ ಭೀಮಾಶಂಕರ, ರುಕ್ಮಾಬಾಯಿ ಮತ್ತು ಪ್ರಜ್ವಲ ಎಂಬ ಮೂರು ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ಗಂಡ ಸುಮಾರು 9 ವರ್ಷಗಳ ಹಿಂದೆ ಮೃತನಾಗಿರುತ್ತಾನೆ. ನನ್ನ ಗಂಡ ಮೃತನಾಗಿದ್ದರಿಂದ ತವರು ಮನೆಯಲ್ಲಿಯೇ

ವಾಸವಾಗಿರುತ್ತೇನೆ. ನಮ್ಮ ಮಕ್ಕಳಿಗೆ ಆಸ್ತಿ ಬೇಕೆಂದು ನಮ್ಮ ಅತ್ತೆ-ಮಾವನ ಮೇಲೆ ದಾವೆ ಮಾಡಿರುತ್ತೇವೆ. ದಾವಾ ಆಸ್ತಿಯ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಚೆಕಬಂದಿ ಹೇಳಲು ಬರುವುದಿಲ್ಲ.

3. ನಾನು 5 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿರುತ್ತೇನೆ . ನನಗೆ ಓದಲು, ಬರೆಯಲು ಬರುತ್ತದೆ. ದಾವಾ ಆಸ್ತಿಯನ್ನು ಮೊದಲು ವಿಠೋಬಾ ಚಂದ್ರಾಮ ಪ್ರಧಾನಿ ದಿ: 27-9-2008 ರಂದು ಸದರಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾನೆ ಎಂದರೆ ಸರಿ. ಸದರಿ ದಾವಾ ಆಸ್ತಿಯನ್ನು ರಾಯಪ್ಪ ಜಟ್ಟೆಪ್ಪ ಪ್ರದಾನಿ ಮತ್ತು ಮಹದೇವಿ ಜಟ್ಟೆಪ್ಪ ಪ್ರಧಾನಿಯವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಅದನ್ನು ರೂ. 1,20,000/-ಕ್ಕೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ವಿಠೋಬಾ ಚಂದ್ರಾಮ ಪ್ರಧಾನಿ ಇವರು ದಿ: 29-10-2010 ನೇ ಇಸವಿಯಲ್ಲಿ ಪ್ರತಿವಾದಿ ನಂ. 1 ರವರಿಗೆ ರೂ. 1.20.000/-ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 2010 ನೇ ಇಸವಿಯಿಂದ ಇಲ್ಲಿಯವರೆಗೆ ಪ್ರತಿವಾದಿ ನಂ. 1 ರವರೇ ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿದ್ದು ಇಲ್ಲಿಯವರೆಗೆ ನನಗೆ ಏನೂ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಅವರು ಖರೀದಿ ಮಾಡಿದಂತೆ ಎಮ್. ಆರ್ ನಂ. 239/2009-10 ಎಂದು ನಮೂದು ಆಗಿರುತ್ತದೆ ಎಂದರೆ ಸರಿ.

4. ನನ್ನ ಗಂಡ ತೀರಿಕೊಂಡು ಸುಮಾರು 9 ವರ್ಷಗಳಾಗಿರುತ್ತವೆ. ದಾವಾ ಆಸ್ತಿಯನ್ನು ಖರೀದಿ ಮಾಡಲು ಎಲ್ಲರೂ ಹಣವನ್ನು ಕೊಟ್ಟಿರುತ್ತಾರೆ. ಸದರಿ ದಾವಾ ಆಸ್ತಿಯು ಪ್ರತಿವಾದಿ ನಂ. 1 ರವರು ಗಳಿಸಿದ ಆಸ್ತಿಯಾಗಿರುವದರಿಂದ ನಮಗೆ ದಾವಾ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿ ನಂ. 1 ರವರ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ನಮಗೆ ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿ ನಂ. 1 ರವರ ಮಕ್ಕಳನ್ನು ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಆ ಕಾರಣಕ್ಕಾಗಿ ನಮ್ಮ ದಾವೆಯು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.